


ಭಗವಂತನ ಲೀಲೆ
ಕಥೆ: ಆರ್.ವಿ.
ಚಿತ್ರ: ಶಂಕರ್
ಮಧುರೆಯಲ್ಲಿ ಪರಶಿವನಿಗೆ ಪ್ರತಿವರ್ಷ ವಿಶೇಷ ಪೂಜೆ ಸಲ್ಲಿಸುವುದು ಒಂದು ಸಂಪ್ರದಾಯ. ರಾಜ, ಅಭಿಷೇಕ ಪಾಂಡ್ಯ ಈ ವಿಶೇಷ ಪೂಜೆಯನ್ನು ಸಲ್ಲಿಸುತ್ತಿದ್ದನು. ನಿತ್ಯಪೂಜೆಗಾಗಿ ಪ್ರತಿ ದಿನ ದೇವತೆಗಳ ರಾಜನಾದ ಇಂದ್ರನು ದೇವಲೋಕದಿಂದ ಬಂದು ಭಕ್ತಿಯಿಂದ ಪೂಜಿಸುತ್ತಿದ್ದನು. ಆದರೆ ಈ ವಿಶೇಷ ಪೂಜೆಯಿಂದ ಅಂದು ಇಂದ್ರನಿಗೆ ಪೂಜೆ ಮಾಡಲು ತಡವಾಯಿತು.
ಇಂದ್ರನನ್ನು ಭೇಟಿ ಮಾಡಲು ವರುಣದೇವ ಒಮ್ಮೆ ಬಂದಾಗ ಇಂದ್ರ ಅವಸರದಿಂದ ಚಡಪಡಿಸುತ್ತಿದ್ದ.
1
ಯಾಕೆ ತುಂಬಾ ಕಳವಳದಿಂದ್ದೀಯೆ ?
ಈ ಸಮಯದಲ್ಲಿ ನಾನು ಮಧುರೆಯಲ್ಲಿ ಶಿವನ ಪೂಜೆ ಮಾಡುತ್ತಿರಬೇಕು. ಆದರೆ ಆ ವಿಶೇಷ ಪೂಜೆಯಿಂದಾಗಿ ದೇವಸ್ಥಾನ ಜನರಿಂದ ತುಂಬಿದೆ.
2
ಅಂದರೆ ಅಲ್ಲಿ ದೇವರ ವಿಶೇಷ ಅಭಿವ್ಯಕ್ತಿ ಇದೆಯೆ?
ಮತ್ತೇನು? ಪರಶಿವನು ಬ್ರಹ್ಮ ಹತ್ಯೆಯ ದೋಷದಿಂದ ನನ್ನನ್ನು ಕಾಪಾಡಲಿಲ್ಲವೆ? ಅಲ್ಲದೆ ಅಶ್ವಿನೀಕುಮಾರರಿಂದಲೂ ವಾಸಿ ಮಾಡಲಾಗದ ನಿನ್ನ ಹೊಟ್ಟೆನೋವು ಕೂಡ ನೀನು ಅಲ್ಲಿ ಪರಶಿವನನ್ನು ಪೂಜಿಸಿದರೆ, ಗುಣವಾಗುವುದು.
ಇಂದ್ರನ ಅರಮನೆಯಿಂದ ಹೊರಟಾಗ ದಾರಿಯಲ್ಲಿ ವರುಣ ಯೋಚಿಸಿದ
3
ನಾನು ಇಂದ್ರನ ಅರಮನೆಗೆ ಬರುವಾಗ ಕಾಮಧೇನುವಿನ ದರ್ಶನವಾಯಿತು. ಅದು ಒಂದು ಶುಭಸೂಚನೆ. ಈಗ ಪರಶಿವನ ಲೀಲೆಯನ್ನು ಕಣ್ಣಾರೆ ನೋಡಿ ಪುನೀತನಾಗುವೆ. ನನ್ನ ಹೊಟ್ಟೆ ನೋವು ವಾಸಿಯಾಗಬಹುದು.


ಆ ಪರಮ ಶಿವನ ಲೀಲೆಯನ್ನು ನೋಡಲು, ವರುಣ ಒಂದು ಆಟವಾಡಬೇಕೆಂದು ತನ್ನ ಅಧೀನದಲ್ಲಿದ್ದ ಸಪ್ತಸಾಗರಗಳನ್ನು ಕರೆದ.
ಸಮುದ್ರಗಳೇ, ಪ್ರಕ್ಷುಬ್ಧಗೊಂಡು, ನಿಮ್ಮ ಉಬ್ಬರದಿಂದ ಮಧುರೆಯನ್ನು ನಾಶಮಾಡಿ.
4
ಕೂಡಲೇ ಅಲೆಗಳು ಅತ್ಯಂತ ಎತ್ತರಕ್ಕೇರಿದವು. ಪರಿಣಾಮವಾಗಿ ಭಯಂಕರ ಬಿರುಗಾಳಿ ಯೆದ್ದು, ನಗರದ ಮರಗಳು ಹಾಗೂ ಕಟ್ಟಡಗಳು ಉರುಳಲಾರಂಭಿಸಿದವು. ಜನರು ಹೆದರಿದರು.
5
ಏನಿದು? ಒಂದೇ ಬಾರಿಗೆ ಮದುರೆ ನಾಶವಾಗಿ ಬಿಡುವುದೆ? ಭಗವಂತನಿಗೆ ಕೋಪ ಬಂದು ಬಿಟ್ಟಿದೆಯೆ?
ರಾಜ ಅಭಿಷೇಕ ಭಯಗೊಂಡು, ದಿಕ್ಕು ತೋಚದೆ ಪರಮಶಿವನ ಬಳಿ ಬಂದು ಅವನಿಗೆ ಮೊರೆ ಹೋದನು.
ಪ್ರಭು, ಎಂತಹ ಪರೀಕ್ಷೆ ಇದು? ತಾವು ನೆಲೆಸಿರುವ ಈ ಊರು ನಾಶವಾಗಬೇಕೆ?
6
ಆಗ, ಅವನಿಗೆ ಒಂದು ಅಶರೀರವಾಣಿ ಕೇಳಿಸಿತು.
7
ಪಾಂಡ್ಯ! ಚಿಂತಿಸಬೇಡ. ನಾನು ಏಳು ಮೋಡಗಳನ್ನು ಕಳುಹಿಸಿ ಎಲ್ಲವನ್ನೂ ಶಾಂತಗೊಳಿಸುವೆನು
ಜೈ ಪರಮಶಿವ, ಜೈ ಪರಮಶಿವ
ಮರುಕ್ಷಣವೇ ಆಕಾಶದಲ್ಲಿ ಹೊಸದಾಗಿ ಮೂಡಿದ ಏಳು ಮೋಡಗಳು ಸಮುದ್ರಗಳನ್ನು ಶಾಂತಗೊಳಿಸಿದವು. ಇದೆಲ್ಲವನ್ನೂ ಗಮನಿಸುತ್ತಿದ್ದ ವರುಣ ಅಲ್ಲಿಗೆ ಬಂದು...
ಆ ಸಮುದ್ರಗಳು ಶಾಂತವಾಗಿ ಬಿಟ್ಟಿವೆ. ಇರಲಿ, ಮೋಡಗಳೇ, ನೀವು ಜೋರಾಗಿ ಮಳೆ ಸುರಿದು ಈ ನಗರವನ್ನು ನಾಶಮಾಡಿ.
8


ಆಗ ಗುಡುಗು ಸಿಡಿಲಿನ ಬಿರುಗಾಳಿ ಎದ್ದು, ಭಾರಿ ಮಳೆ ಸುರಿಯಿತು.
9
ರಾಜನು ದೇವಸ್ಥಾನದಲ್ಲಿ ಭಗವಂತನನ್ನು ಪ್ರಾರ್ಥಿಸುತ್ತಿದ್ದ. ಆಗ.......
ಓ ಮೇಘಗಳೇ, ಮಳೆಯನ್ನು ನಿಯಂತ್ರಿಸಿ, ನೀರು ನಗರವನ್ನು ಪ್ರವೇಶಿಸದಂತೆ ನೋಡಿಕೊಳ್ಳಿ.
10
ತಕ್ಷಣವೇ, ಶಿವನ ಆಜ್ಞೆಯನ್ನು ಪಾಲಿಸಿದ ಮೋಡಗಳು ಮರೆಯಾದವು. ಮಳೆ ನಿಂತಿತು. ವರುಣನಿಗೆ ತನ್ನ ತಪ್ಪಿನ ಅರಿವಾಗಿ.....
ಮಹಾದೇವ, ನನ್ನನ್ನು ಕ್ಷಮಿಸಿಬಿಡು. ನಿನ್ನ ಲೀಲೆಯನ್ನು ನೋಡಲು ನಾನು ಹೀಗೆ ವರ್ತಿಸಿದೆ.
11
ವರುಣ ತಾನು ಮಾಡಿದ ತಪ್ಪಿನ ಪ್ರಾಯಶ್ಚಿತ್ತಕ್ಕಾಗಿ ಮದುರೆಯ ದೇವಸ್ಥಾನದ ಕೊಳದಲ್ಲಿ ಸ್ನಾನ ಮಾಡಿ ಭಗವಂತ ಸೋಮಸುಂದರನನ್ನು ಪೂಜಿಸಿದನು.
ನಿನಗೇನು ವರಬೇಕು ಕೇಳು? ನಿನ್ನ ಹೊಟ್ಟೆ ನೋವು ಬೇಗನೆ ಗುಣ ವಾಗುವುದು.
12
ಭಗವಂತ! ನನಗೆ ಮತ್ತಾವ ಆಸೆಯೂ ಇಲ್ಲ. ನೀವು ನನ್ನ ರೋಗವನ್ನು ಗುಣ ಮಾಡಿದಿರಿ. ತಮ್ಮ ದರ್ಶನ ಭಾಗ್ಯವೂ ಸಿಕ್ಕಿತು.
ದೇವಸ್ಥಾನದಲ್ಲಿ ಅಭಿಷೇಕ ಪಾಂಡ್ಯ ......
ಭಗವಂತ! ತಮ್ಮ ದಿವ್ಯಲೀಲೆಯನ್ನು ಕಂಡು ಬೆರಗಾಗಿದ್ದೇನೆ. ತಮ್ಮ ಮೊರೆಹೊಕ್ಕವರನ್ನು ತಾವು ಯಾವಾಗಲೂ ಕಾಪಾಡುತ್ತೀರಿ.
13
ನಿನಗೆ ಪರಿಶುದ್ಧ ಭಕ್ತಿಯುಂಟಾಗಲಿ